KAMS400015112025

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ
ಕೆ.ಆರ್.ನಗರ ತಾಲ್ಲೂಕು, ಮೈಸೂರು.

ಉಪಸ್ಥಿತರುಃ **ಶ್ರೀ ಅರವಿಂದ್ರ ಬಿ.ಸಿ., ಬಿ.ಎ, ಎಲ್.ಎಲ್.ಬಿ.,**
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೆ.ಆರ್.ನಗರ ತಾಲ್ಲೂಕು, ಮೈಸೂರು.

ದಿನಾಂಕಃ 09 ನೇ ಜೂನ್, 2026

ಸಿ.ಸಿ. ಸಂಖ್ಯೆ:- 438/2025

ಪಿರ್ಯಾದುದಾರರು : **ಶ್ರೀಮತಿ ಸುಶೀಲ,**
ಬಿನ್ ಚಿಕ್ಕಮಾದಯ್ಯ,
ವಯಸ್ಸು ಸುಮಾರು 60 ವರ್ಷ,
ವಾಸಃ ವಾರ್ಡ್ ನಂ.23,
ಮಧುವನಹಳ್ಳಿಬಡಾವಣೆ,
ಕೆ.ಆರ್.ನಗರ ಟೌನ್,
ಕೆ.ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ.
(ಶ್ರೀ ಎ.ಎನ್., ವಕೀಲರು)

-ವಿರುದ್ಧ-

ಆರೋಪಿ : **ಶ್ರೀಮತಿ ಸುಶೀಲಮ್ಮ,**
ಕೋಂ ಪುರುಷೋತ್ತಮ್,
ವಯಸ್ಸು ಸುಮಾರು 50 ವರ್ಷ,

ವಾಸಃ ವಾರ್ಡ್ ನಂ.12,
3 ನೇ ಬೀದಿ, ಅಂಬೇಡ್ಕರ್ ನಗರ,
ಕೆ.ಆರ್.ನಗರ ಟೌನ್,
ಕೆ.ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ.
(ಶ್ರೀ ಕೆ.ಪಿ.ಎಂ., ವಕೀಲರು)

:: **ತೀರ್ಪು** ::

ಆರೋಪಿಯು ವರ್ಗಾವಣೀಯ ಲಿಖಿತ ಕಾಯ್ದೆಯ ಕಲಂ 138 ರಡಿಯಲ್ಲಿ ಅಪರಾಧವೆಸಗಿದ್ದಾರೆಂದು ಪ್ರಸ್ತುತ ಖಾಸಗಿ ದೂರನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಕಲಂ 223 ರಡಿಯಲ್ಲಿ ಸಲ್ಲಿಸಲಾಗಿದೆ.

2. **ದೂರುದಾರರ ದೂರಿನ ಸಂಕ್ಷಿಪ್ತ ಸಾರಾಂಶ ಈ ಮುಂದಿನಂತೆ ಇರುತ್ತದೆಃ**

ದೂರಿನ ಸಾರಾಂಶವೆಂದರೆ, ಪಿರ್ಯಾದುದಾರರು ಮತ್ತು ಆರೋಪಿಯು ಪರಸ್ಪರ ಪರಿಚಯಸ್ಥರಾಗಿರುತ್ತಾರೆ. ಸದರಿ ಪರಿಚಯದ ಆಧಾರದ ಮೇರೆಗೆ ದಿನಾಂಕ 30.08.2025 ರಂದು ಆರೋಪಿಯು ಪಿರ್ಯಾದುದಾರರನ್ನು ಭೇಟಿಯಾಗಿ ತಮ್ಮ ಕಾನೂನುಬದ್ಧ ಅವಶ್ಯಕತೆಗಳಿಗಾಗಿ ರೂ.1,70,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲವನ್ನು ಒಂದು ತಿಂಗಳ ಒಳಗಾಗಿ ಮರುಪಾವತಿ ಮಾಡುತ್ತೇನೆಂದು ಭರವಸೆ ನೀಡಿರುತ್ತಾರೆ. ಮುಂದುವರೆದು, ಆರೋಪಿಯು ಸದರಿ ಸಾಲದ ಮರುಪಾವತಿಗಾಗಿ ತನ್ನ ಬ್ಯಾಂಕಿನ ಖಾತೆಯನ್ನು ಹೊಂದಿರುವ ಕೋಟಕ್

ಮಹೀಂದ್ರಾ ಬ್ಯಾಂಕ್, ಹುಣಸೂರು ಶಾಖೆ ಇಲ್ಲಿನ ಚೆಕ್ಕು ಸಂಖ್ಯೆ 000001, ದಿನಾಂಕ 30.09.2025, ರೂ.1,70,000/- ಹಣ ಮೊತ್ತದ ಚೆಕ್ಕನ್ನು ನೀಡಿರುತ್ತಾರೆಂದು ಹೇಳಿರುತ್ತಾರೆ. ಆರೋಪಿಯ ಭರವಸೆ ಮೇಲೆ ಪಿರ್ಯಾದುದಾರರು ಚೆಕ್ಕನ್ನು ನಗದೀಕರಿಸಲು ತಮ್ಮ ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ.

3. ಮುಂದುವರೆದು, ಪಿರ್ಯಾದುದಾರರು ತಮ್ಮ ದೂರಿನಲ್ಲಿ ಆರೋಪಿ ನೀಡಿರುವ ಮೇಲ್ಕಂಡ ಚೆಕ್ಕನ್ನು ತನ್ನ ಖಾತೆಯನ್ನು ಹೊಂದಿರುವ ಇಂಡಿಯನ್ ಓವರ್ ಸೀಸ್ ಬ್ಯಾಂಕ್, ಕೆ.ಆರ್.ನಗರ ಶಾಖೆ ಇಲ್ಲಿ ನಗದೀಕರಿಸುವ ಸಲುವಾಗಿ ಹಾಜರುಪಡಿಸಿದ್ದು, ಆದರೆ ಸದರಿ ಚೆಕ್ಕು ಆರೋಪಿಯ ಖಾತೆಯಲ್ಲಿ "**ಸಾಕಷ್ಟು ಹಣವಿಲ್ಲ**" ಎಂದು ದಿನಾಂಕಃ 10.10.2025 ರ ಮೆಮೋದೊಂದಿಗೆ ಹಿಂದಿರುಗಿತು. ತದನಂತರ ಸದರಿ ಮಾಹಿತಿಯನ್ನು ಆರೋಪಿಗೆ ತಿಳಿಸಿದ್ದರೂ ಸಹ ಸಾಲದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ.

4. ತದನಂತರ, ಪಿರ್ಯಾದುದಾರರು ದಿನಾಂಕಃ 18.10.2025 ರಂದು ತಮ್ಮ ವಕೀಲರ ಮುಖಾಂತರ ಆರೋಪಿಗೆ ನೊಂದಾಯಿತ ಅಂಚೆಯ ಮುಖಾಂತರ ತಿಳುವಳಿಕೆ ಪತ್ರವನ್ನು ನೀಡಿ, ಚೆಕ್ಕಿನ ಹಣವನ್ನು ತಿಳುವಳಿಕೆ ಪತ್ರ ತಲುಪಿದ 15 ದಿನಗಳ ಒಳಗಾಗಿ ಪಾವತಿಸುವಂತೆ ಕೇಳಿಕೊಂಡರು. ಸದರಿ ತಿಳುವಳಿಕೆ ಪತ್ರವನ್ನು ಆರೋಪಿಯು ಸ್ವೀಕರಿಸದೆ ನಿರಾಕರಿಸಿರುತ್ತಾರೆ. ಆರೋಪಿಗೆ ತಿಳುವಳಿಕೆ ಪತ್ರದ ಬಗ್ಗೆ ಮಾಹಿತಿ ಇದ್ದರೂ ಸಹ, ಆರೋಪಿಯು ಚೆಕ್ಕಿನಲ್ಲಿ ನಮೂದು ಮಾಡಿರುವ ಹಣವನ್ನು ಮರುಪಾವತಿ

ಮಾಡಿರುವುದಿಲ್ಲ. ಆದುದರಿಂದ, ಆರೋಪಿಯು ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138ರ ಅಡಿಯಲ್ಲಿ ಅಪರಾಧವೆಸಗಿದ್ದಾರೆ. ಪ್ರಸ್ತುತ ದೂರನ್ನು ಮಾಡಲು ವ್ಯಾಜ್ಯ ಕಾರಣವು ಆರೋಪಿಗೆ ತಿಳುವಳಿಕೆ ಪತ್ರ ತಲುಪಿದ 15 ದಿನಗಳೊಳಗಾಗಿ ಚೆಕ್ಕಿನಲ್ಲಿ ನಮೂದು ಮಾಡಿರುವ ಹಣವನ್ನು ಪಾವತಿ ಮಾಡಲು ವಿಫಲವಾದ ನಂತರ ಉದ್ಭವವಾಯಿತು. ಆರೋಪಿಯು ನೀಡಿದ ಚೆಕ್ಕನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ಇಂಡಿಯನ್ ಓವರ್ ಸೀಸ್ ಬ್ಯಾಂಕ್, ಕೆ.ಆರ್.ನಗರ ಶಾಖೆ ಬ್ಯಾಂಕಿನಲ್ಲಿ ಹಾಜರುಪಡಿಸಿದ ಕಾರಣ ಮತ್ತು ಸದರಿ ಚೆಕ್ಕು ಅನಾಧಾರಿತವಾಗದೆ ಹಿಂದಿರುಗಿದ ಕಾರಣ ಈ ನ್ಯಾಯಾಲಯಕ್ಕೆ ಪ್ರಸ್ತುತ ದೂರನ್ನು ಸ್ವೀಕರಿಸುವ ಮತ್ತು ತೀರ್ಮಾನಿಸುವ ಅಧಿಕಾರ ಇರುತ್ತದೆ.

5. ಈ ನ್ಯಾಯಾಲಯವು ವರ್ಗಾವಣೀಯ ಲಿಖಿತ ಕಾಯ್ದೆಯ ಅಡಿಯಲ್ಲಿ ಆರೋಪಿಸಿರುವ ಅಪರಾಧಕ್ಕೆ ಸಂಜ್ಞೆಯನ್ನು ತೆಗೆದುಕೊಂಡ ನಂತರ ಆರೋಪಿಗೆ ಸಮನು ನೀಡಿತ್ತು. ಸಮನು ಜಾರಿಯಾದ ನಂತರ ಆರೋಪಿಯು ತನ್ನ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಕಲಂ 478 ರಲ್ಲಿ ಸಲ್ಲಿಸಿದ್ದರು. ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸಿ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿತ್ತು. ನಂತರ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138ರ ಅಡಿಯಲ್ಲಿ ಆರೋಪಿಸಿರುವ ಅಪರಾಧಕ್ಕಾಗಿ, ಆರೋಪಿಗೆ ತಪ್ಪಿನ ವಾದವನ್ನು ಕನ್ನಡದಲ್ಲಿ ಓದಿ ಹೇಳಲಾಯಿತು,

ಆರೋಪಿಯು ಸದರಿ ತಪ್ಪಿನ ವಾದವನ್ನು ನಿರಾಕರಿಸಿ ವಿಚಾರಣೆ ಆಗಬೇಕು ಎಂದು ಕೇಳಿಕೊಂಡಿದ್ದಾರೆ.

6. ಪಿರ್ಯಾದುದಾರರು ತನ್ನ ಪಿರ್ಯಾದಿಯಲ್ಲಿ ಹೇಳಿರುವ ಸಂಗತಿಗಳನ್ನು ನಿರೂಪಿಸುವ ಸಲುವಾಗಿ ತನ್ನನ್ನು ತಾನು ಫ್ರಾಸಾ-1 ಎಂದು ವಿಚಾರಣೆಗೆ ಗುರಿಪಡಿಕೊಂಡಿರುತ್ತಾರೆ. ಫ್ರಾಸಾ-1ರವರು ತಮ್ಮ ಮುಖ್ಯ ವಿಚಾರಣೆಯ ಶಪಥ ಪತ್ರವನ್ನು ಸಲ್ಲಿಸಿ, ಸದರಿ ಶಪಥ ಪತ್ರದಲ್ಲಿ ದೂರಿನಲ್ಲಿ ಹೇಳಿರುವ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ. ಫ್ರಾಸಾ-1ರವರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿಪಿ-1 ರಿಂದ 5 ದಾಖಲೆಗಳನ್ನು ಗುರುತಿಸಿರುತ್ತಾರೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಕಲಂ 351 ರ ಅಡಿಯಲ್ಲಿ ಆರೋಪಿಯ ಹೇಳಿಕೆಯನ್ನು ಅಭಿಲೇಖಿಸಲಾಯಿತು. ಮತ್ತೊಂದು ಕಡೆ ಆರೋಪಿಯು ಪಾಟೀ ಸವಾಲು ವಿಚಾರಣೆಯಲ್ಲಿ ತೆಗೆದುಕೊಂಡಿರುವ ನಿಲುವನ್ನು ರುಜುವಾತುಪಡಿಸುವ ಸಲುವಾಗಿ ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಗುರಿಪಡಿಸಿಕೊಂಡಿಸಿದ್ದು, ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

7. ಉಭಯಪಕ್ಷಗಾರರ ಪರ ವಕೀಲರ ವಾದವನ್ನು ವಿಸ್ತೃತವಾಗಿ ಆಲಿಸಲಾಯಿತು. ನ್ಯಾಯಾಲಯದ ಸಮ್ಮುಖದಲ್ಲಿರುವ ಪ್ರಸ್ತುತ ದೂರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

8. ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಪರಿಗಣನೆಗೆ ಬರುತ್ತದೆ.

1) ಆರೋಪಿಯು ಕಾನೂನಾತ್ಮಕವಾಗಿ ಪಾವತಿಸಬೇಕಾದ ಸಾಲದ ಹಣಕ್ಕಾಗಿ ಪಿರ್ಯಾದುದಾರರ ಪರವಾಗಿ ಕೋಟಕ್ ಮಹೀಂದ್ರಾ ಬ್ಯಾಂಕ್, ಹುಣಸೂರು ಶಾಖೆ ಇಲ್ಲಿನ ಚೆಕ್ ಸಂಖ್ಯೆ 000001 ನ್ನು ದಿನಾಂಕಃ 30.09.2025 ಎಂದು ನಮೂದು ಮಾಡಿ ರೂ.1,70,000/- ಗಳಿಗೆ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದುದಾರರು ಇಂಡಿಯನ್ ಓವರ ಸೀಸ್ ಬ್ಯಾಂಕ್, ಕೆ.ಆರ್.ನಗರ ಶಾಖೆಯಲ್ಲಿ ನಗದೀಕರಿಸಿಕೊಳ್ಳಲು ಹಾಜರುಪಡಿಸಿದಾಗ "ಸಹಿಯಲ್ಲಿ ವ್ಯತ್ಯಾಸ ಇದೆ" ಎಂದು ದಿನಾಂಕಃ 10.10.2025 ರಂದು ಹಿಂಬರಹ ನೀಡಿದ್ದು, ನಂತರ ಚೆಕ್ಕಿನ ರಚಕನಿಗೆ ಲಿಖಿತ ರೂಪದಲ್ಲಿ ತಿಳುವಳಿಕೆ ಪತ್ರವನ್ನು ನೀಡಿ ಸದರಿ ಮೊತ್ತದ ಹಣವನ್ನು ಮರುಪಾವತಿ ಮಾಡಲು ಆರೋಪಿಯನ್ನು ಕೋರಿದ್ದಾರೆಂದು ಮತ್ತು ಆರೋಪಿಯು ಸದರಿ ತಿಳುವಳಿಕೆ ಪತ್ರವನ್ನು ಸ್ವೀಕರಿಸಿದ 15 ದಿನಗಳ ಅವಧಿಯೊಳಗೆ ಚೆಕ್ಕಿನ ಹಣವನ್ನು ಪಾವತಿಸಲು ವಿಫಲಗೊಂಡಿರುವ ಕಾರಣ ವರ್ಗಾವಣೀಯ ಲಿಖಿತ ಕಾಯ್ದೆಯ ಕಲಂ 138ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆಯೇ ಎಂದು ಪಿರ್ಯಾದುದಾರರು ಸಂಶಯಾಸ್ಪದವಾಗಿ ರುಜುವಾತುಪಡಿಸಿದ್ದಾರೆಯೇ ?

2) ಯಾವ ಆದೇಶ ?

9. ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭಸಿರುವ ಮೇಲ್ಕಂಡ ಅಂಶಗಳಿಗೆ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಈ ನ್ಯಾಯಾಲಯವು ಉತ್ತರಿಸಿದೆ.

ಅಂಶ 1 : ನಕಾರಾತ್ಮಕವಾಗಿ

ಅಂಶ 2 : ಅಂತಿಮ ಆದೇಶ ಈ ಕೆಳಕಂಡ ಕಾರಣಗಳಂತೆ ಇರುತ್ತದೆ.

ಕಾರಣಗಳು

10. **ಅಂಶ 1:-** ದೂರುದಾರರು ಮತ್ತು ಆರೋಪಿತರು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇರೆಗೆ ದಿನಾಂಕ 30.08.2025 ಆರೋಪಿಯು ಪಿರ್ಯಾದುದಾರರನ್ನು ಭೇಟಿಯಾಗಿ ತನ್ನ ಕಾನೂನುಬದ್ಧ ಅವಶ್ಯಕತೆಗಳಿಗಾಗಿ ರೂ.1,70,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಮರುಪಾವತಿಗಾಗಿ ಆರೋಪಿಯು ತನ್ನ ಖಾತೆಗೆ ಸಂಬಂಧಿಸಿದ ಕೋಟಕ್ ಮಹೀಂದ್ರಾ ಬ್ಯಾಂಕ್, ಹುಣಸೂರು ಶಾಖೆಯ ಚೆಕ್ ಸಂಖ್ಯೆ 000001 ನ್ನು ರೂ.1,70,000/-ಕ್ಕಾಗಿ ದಿನಾಂಕಃ 30.09.2025 ಎಂದು ನಮೂದು ಮಾಡಿ ನೀಡಿದ್ದು, ಮುಂದುವರೆದು ಸದರಿ ಚೆಕ್ಕನ್ನು ಪಿರ್ಯಾದುದಾರರು ತನ್ನ ಖಾತೆಯನ್ನು ಹೊಂದಿರುವ ಇಂಡಿಯನ್ ಓವರ್ ಸೀಸ್ ಬ್ಯಾಂಕ್, ಕೆ.ಆರ್.ನಗರ ಶಾಖೆ ಇಲ್ಲಿ ನಗದೀಕರಿಸುವ ಸಲುವಾಗಿ ಹಾಜರುಪಡಿಸಿದ್ದು, ಸದರಿ ಬ್ಯಾಂಕಿನವರು ಆರೋಪಿಯ ಖಾತೆಗೆ ಕಳುಹಿಸಿದಾಗ "**ಸಹಿಯಲ್ಲಿ ವ್ಯತ್ಯಾಸ ಇದೆ**" ಎಂದು ದಿನಾಂಕಃ 10.10.2025 ರಂದು ಹಿಂಬರಹದೊಂದಿಗೆ ಹಿಂದಿರುಗಿದ್ದು, ತದನಂತರ, ದಿನಾಂಕಃ 18.10.2025 ರಂದು ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ಆರೋಪಿಗೆ ಕಾನೂನು ತಿಳುವಳಿಕೆ ಪತ್ರವನ್ನು ನೀಡಿ, ಚೆಕ್ಕಿನಲ್ಲಿ ನಮೂದು ಮಾಡಿರುವ ರೂ.1,70,000/- ಮೊತ್ತದ

ಹಣವನ್ನು ತಿಳುವಳಿಕೆ ಪತ್ರ ತಲುಪಿದ 15 ದಿನಗಳ ಒಳಗಾಗಿ ಪಾವತಿಸುವಂತೆ ಕೇಳಿಕೊಂಡಿದ್ದು, ಸದರಿ ತಿಳುವಳಿಕೆ ಪತ್ರದ ಬಗ್ಗೆ ಆರೋಪಿಗೆ ಮಾಹಿತಿ ಇದ್ದರೂ ಸಹ, ಆರೋಪಿಯು ಚೆಕ್ಕಿನಲ್ಲಿ ನಮೂದು ಮಾಡಿರುವ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಮತ್ತೊಂದು ಕಡೆ ಆರೋಪಿಯು ದೂರುದಾರರ ಪ್ರಕರಣವನ್ನು ನಿರ್ದಿಷ್ಟವಾಗಿ ನಿರಾಕರಿಸಿರುತ್ತಾರೆ.

11. ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 101 ಮತ್ತು ಕಲಂ 103 ರಂತೆ ಪಿರ್ಯಾದುದಾರರು ತಾವು ದೂರಿನಲ್ಲಿ ಹೇಳಿದ ಸಂಗತಿಗಳನ್ನು ನಿರೂಪಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ಪಿರ್ಯಾದುದಾರರು ತನ್ನ ದೂರಿನಲ್ಲಿ ಹೇಳಿರುವ ಸಂಗತಿಗಳ ನಿರೂಪಣೆಗಾಗಿ ತನ್ನನ್ನು ತಾನು ಫ್ರಾಸಾ–1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಫ್ರಾಸಾ–1 ರವರು ತನ್ನ ಮುಖ್ಯ ವಿಚಾರಣೆಯ ಶಪಥ ಪತ್ರವನ್ನು ಸಲ್ಲಿಸಿದ್ದು, ಸದರಿ ಶಪಥ ಪತ್ರದಲ್ಲಿ ದೂರಿನಲ್ಲಿ ಹೇಳಿರುವ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ. ಫ್ರಾಸಾ–1 ರವರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿಪಿ–1 ರಿಂದ 5 ದಾಖಲೆಗಳನ್ನು ಗುರುತಿಸಿರುತ್ತಾರೆ. ನಿಪಿ–1 ದಾಖಲೆಯು ಕೋಟಕ್ ಮಹೀಂದ್ರಾ ಬ್ಯಾಂಕ್, ಕೆ.ಆರ್.ನಗರ ಶಾಖೆಯ ಚೆಕ್ ಸಂಖ್ಯೆ 000001 ಆಗಿರುತ್ತದೆ. ನಿಪಿ–2 ದಾಖಲೆಯು ಹಿಂಬರಹ ಆಗಿದ್ದು, ಅದರಲ್ಲಿ "**Drawers Signature Differs**" ಎಂದು ಕಾರಣ ನೀಡಿ ಆರೋಪಿ ನೀಡಿದ ಚೆಕ್ಕು ದಿನಾಂಕ 10.10.2025 ರಂದು ಅನಾಧಾರಿತವಾಗಿರುತ್ತದೆ ಎಂದು ನಮೂದಿಸಲಾಗಿದೆ. ಆದರೆ ದೂರಿನಲ್ಲಿ

ದೂರುದಾರರು ನಿಶಾನೆ ಪಿ–1 ಚೆಕ್ಕು ಸಾಕಷ್ಟು ಹಣವಿಲ್ಲ ಎಂದು ಅನಾಧಾರಿತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಿಪಿ–3 ದಾಖಲೆಯು ದಿನಾಂಕ 18.10.2025 ರಂದು ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ಆರೋಪಿಗೆ ನೀಡಿದ ತಿಳುವಳಿಕೆ ಪತ್ರ ಆಗಿರುತ್ತದೆ. ನಿಪಿ–4 ಮತ್ತು 5 ದಾಖಲೆಗಳು ಅಂಚೆ ರಶೀದಿ ಮತ್ತು ಜಾರಿಯಾಗದೇ ವಾಪಸ್ಸು ಬಂದಿರುವ ಅಂಚೆ ಲಕೋಟೆಗಳಾಗಿರುತ್ತವೆ.

12. ಮತ್ತೊಂದು ಕಡೆ ಆರೋಪಿಯು ತಾನು ತೆಗೆದುಕೊಂಡಿರುವ ಪ್ರತಿರಕ್ಷಣೆಯನ್ನು ನಿರೂಪಿಸುವ ಸಲುವಾಗಿ ತನ್ನನ್ನು ತಾನು ಆ.ಸಾ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಮುಖ್ಯ ವಿಚಾರಣೆಯಲ್ಲಿ ದೂರುದಾರರು ತನಗೆ ಪರಿಚಯವಿರುವುದಿಲ್ಲ ಎಂದು ಹಾಗೂ ತಮ್ಮ ಮತ್ತು ದೂರುದಾರರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ. ಸುಮಿತ್ರ ಎಂಬುವವರು ಮಹಿಳಾ ಸಂಘವನ್ನು ನಡೆಸುತ್ತಿದ್ದು, ಆರೋಪಿಯನ್ನು ಸದರಿ ಸಂಘದ ಸದಸ್ಯನಾಗಿ ಮಾಡುತ್ತೇನೆ ಎಂದು ಹೇಳಿ ಸುಮಿತ್ರ ರವರು ತನ್ನಿಂದ ಒಂದು ಚೆಕ್ಕನ್ನು ಪಡೆದುಕೊಂಡಿದ್ದು, ದೂರುದಾರರು ಸದರಿ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಹಾಗೂ ದೂರುದಾರರಿಗೆ ರೂ.1,70,000/– ಹಣವನ್ನು ಸಾಲವಾಗಿ ನೀಡುವ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದು ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ.

13. ಪಿರ್ಯಾದುದಾರರ ಮತ್ತು ಆರೋಪಿಯ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯ ವಿಚಾರಣೆಯನ್ನು ಪರಿಶೀಲಿಸಿ ಚರ್ಚಿಸುವ ಮೊದಲು ಈ ನ್ಯಾಯಾಲಯ ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ 1881 ರ ಕಲಂ 138 ರಲ್ಲಿ ಏನು ಹೇಳುತ್ತದೆ ಎಂಬ ಬಗ್ಗೆ ಚರ್ಚಿಸುವುದು ಸೂಕ್ತವೆನಿಸುತ್ತದೆ. ಆದ್ದರಿಂದ ಕಲಂ 138 ರಲ್ಲಿ ಹೇಳಿರುವ ಅಂಶಗಳನ್ನು ಈ ಪ್ರಕರಣದ ಅನುಕೂಲಕ್ಕಾಗಿ ಯಥಾವತ್ತಾಗಿ ಈ ಮುಂದಿನಂತೆ ಬರೆಯಲಾಗಿದೆ.

"ಖಾತೆಯಲ್ಲಿ ಹಣವಿಲ್ಲದ ಮುಂತಾದವುಗಳಿಗಾಗಿ ಚೆಕ್ಕಿನ ಅಮಾನ್ಯತೆ:-

ಒಬ್ಬ ವ್ಯಕ್ತಿಯಿಂದ ಯಾವುದೇ ಋಣ ಅಥವಾ ಇತರ ಹೊಣೆಗಾರಿಕೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಬಿಡುಗಡೆಗಾಗಿ ಆತನಿಂದ ಒಬ್ಬ ಬ್ಯಾಂಕರ್ ನೊಂದಿಗೆ ನಿರ್ವಹಣೆ ಮಾಡಲಾದ ಖಾತೆಗೆ ಯಾವುದೇ ಮೊತ್ತದ ಹಣವನ್ನು ಮತ್ತೊಬ್ಬ ವ್ಯಕ್ತಿಗೆ ಪಾವತಿಸುವುದಕ್ಕಾಗಿ ಯಾವುದೇ ಚೆಕ್ಕನ್ನು ನೀಡಿರುವ ಸಂದರ್ಭಗಳಲ್ಲಿ, ಚೆಕ್ಕನ್ನು ಮಾನ್ಯ ಮಾಡುವುದಕ್ಕಾಗಿ ಆ ಖಾತೆಯಲ್ಲಿ ಸಾಕಷ್ಟು ಮೊತ್ತದ ಹಣವು ಆತನ ಶಿಲ್ಕು ಇಲ್ಲದಿರುವ ಕಾರಣದಿಂದಾಗಲಿ ಅಥವಾ ಆ ಬ್ಯಾಂಕಿನೊಂದಿಗೆ ಮಾಡಿಕೊಂಡ ಒಂದು ಒಪ್ಪಂದದಿಂದ ಆ ಖಾತೆಯಿಂದ ಪಾವತಿಸಬೇಕಾದುದಕ್ಕಾಗಿ ಸಿದ್ಧತೆಯಾದ ಮೊತ್ತವನ್ನು ಮೀರಿದುದರ ಕಾರಣದಿಂದಾಗಲಿ ಬ್ಯಾಂಕಿನಿಂದ ಪಾವತಿಗೊಳ್ಳದೆ ಹಿಂದಿರುಗಿಸಿದಾಗ ಅಂತಹ ವ್ಯಕ್ತಿಯು ಒಂದು ಅಪರಾಧವನ್ನು ಮಾಡಿರುವನೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳಿಗೆ ಭಾದಕವಾದಂತೆ (ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿ) ಗಾಗಿ ಕಾರಾವಾಸದಿಂದ ಅಥವಾ ಚೆಕ್ಕು

ಮೊತ್ತದ ಎರಡು ಪಟ್ಟು ಮೊತ್ತದ ಜುಲ್ಮಾನೆಯಿಂದ ಅಥವಾ ಇವೆರಡೂ ಶಿಕ್ಷೆಯಿಂದಲೂ ದಂಡಿಸತಕ್ಕದ್ದು.

ಪರಂತು ಈ ಕಲಂನಲ್ಲಿ ಉಳ್ಳ ಯಾವುದು –

(ಎ) ಚೆಕ್ಕನ್ನು ರಚಿಸಿದ ದಿನಾಂಕದಿಂದ 3 ತಿಂಗಳ ಕಾಲಾವಧಿಗಾಗಿ ಅಥವಾ ಅದರ ಸಿಂಧುತ್ವದ ಅವಧಿಯೊಳಗಾಗಿ ಯಾವುದು ಶೀಘ್ರವೋ ಆ ಅವಧಿಯೊಳಗಾಗಿ ಬ್ಯಾಂಕಿಗೆ ಹಾಜರುಪಡಿಸಿದ.

(ಬಿ) ಸಂಧರ್ಭನುಸಾರ, ಚೆಕ್ ನ ಯಾಥಾಕ್ರಮದಲ್ಲಿ ಪ್ರಾಪ್ತಿಕರ್ತ ಅಥವಾ ಧಾರಕನು ಚೆಕ್ ಪಾವತಿಗೊಳ್ಳದಿದ್ದರ ಸಂಬಂಧ ಬ್ಯಾಂಕಿನಿಂದ ಆತನು ಸ್ವೀಕರಿಸಿದ ಮಾಹಿತಿಯ (ಮೂವತ್ತು ದಿನಗಳ ಒಳಗಾಗಿ) ಚೆಕ್‌ನ ರಚಕನಿಗೆ, ಲಿಖಿತ ರೂಪದಲ್ಲಿ ಒಂದು ತಿಳುವಳಿಕೆ ಪತ್ರವನ್ನು ನೀಡುವುದರಿಂದ ಸದರಿ ಮೊತ್ತದ ಹಣದ ಪಾವತಿಗೆ ತಗಾದೆಯನ್ನು ಮಾಡಿದ ಮತ್ತು

(ಸಿ) ಅಂತಹ ಚೆಕ್‌ನ ರಚಕನು ಸದರಿ ಮೊತ್ತದ ಹಣವನ್ನು ಚೆಕ್ ನ ಯಥಾ ಕ್ರಮದಲ್ಲಿ ಸಂದರ್ಭಾನುಸಾರ, ಪ್ರಾಪ್ತಿಕರ್ತನಿಗೆ ಅಥವಾ ಧಾರಕನಿಗೆ ಸದರಿ ತಿಳುವಳಿಕೆ ಪತ್ರವನ್ನು ಸ್ವೀಕರಿಸಿದ 15 ಅವಧಿಯೊಳಗೆ ಪಾವತಿಸಲು ವಿಫಲಗೊಂಡ ಹೊರತು ಅನ್ವಯವಾಗತಕ್ಕದಲ್ಲ.

ವಿವರಣೆಃ ಈ ಕಲಂನ ಉದ್ದೇಶಗಳಿಗಾಗಿ ಋಣ ಅಥವಾ ಹೊಣೆಗಾರಿಕೆ ಎಂಬುದರ ಅರ್ಥವೇನೆಂದರೆ ಕಾನೂನುಬದ್ಧವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಇತರ ಹೊಣೆಗಾರಿಕೆ ".

14. ಮೇಲಿನ ಕಲಂನಲ್ಲಿ ವಿವರಿಸಲಾದ ಅಂಶಗಳನ್ನು ಪರಿಶೀಲಿಸಿದಾಗ, ಮುಖ್ಯವಾಗಿ ಕಂಡುಬರುವ ಅಂಶಗಳೆಂದರೆ, ಚೆಕ್ಕನ್ನು ನೀಡಿರುವ ಸಂದರ್ಭದಲ್ಲಿ ಚೆಕ್ಕನ್ನು ಮಾನ್ಯ ಮಾಡುವುದಕ್ಕಾಗಿ ಆ ಖಾತೆಯಲ್ಲಿ ಸಾಕಷ್ಟು ಮೊತ್ತದ ಹಣವು ಆತನ ಶಿಲ್ಕು ಇಲ್ಲದಿರುವ ಕಾರಣದಿಂದಾಗಲೀ ಅಥವಾ ಬ್ಯಾಂಕಿನೊಂದಿಗೆ ಮಾಡಿಕೊಂಡ ಒಂದು

ಒಪ್ಪಂದದಿಂದ ಖಾತೆಯಿಂದ ಪಾವತಿಸಬೇಕಾದುದಕ್ಕಾಗಿ ಸಿದ್ಧತೆಯಾದ ಮೊತ್ತವನ್ನು ಮೀರಿದುದರ ಕಾರಣದಿಂದಾಗಿ ಬ್ಯಾಂಕಿನಿಂದ ಪಾವತಿಗೊಳ್ಳದೆ ಹಿಂದಿರುಗಿಸಿದರೆ ಒಂದು ಅಪರಾಧವಾಗುತ್ತದೆ.

15. ಈ ನ್ಯಾಯಾಲಯವು ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯ **ಶ್ರೀ ಎಂ.ಎಸ್.ಆರ್ ಅಂಡ್ ಅದರ್ಸ್ ವಿರುದ್ಧ ಪಲಾನಿಯಪ್ಪನ್** (2013)1 ಎಸ್.ಸಿ.ಸಿ.177 ರ ಪ್ರಕರಣದಲ್ಲಿ ನೀಡಿರುವ ತೀರ್ಪನ್ನು ಪರಿಶೀಲಿಸಿದಾಗ ಕಲಂ 138 ಅನ್ವಯವಾಗಬೇಕಾದರೆ, ಈ ಕೆಳಕಂಡ ಘಟಕಾಂಶಗಳನ್ನು ರುಜುವಾತುಪಡಿಸಬೇಕು.

> **1. ಚೆಕ್ಕನ್ನು ಪಾವತಿಗಾಗಿ ಬ್ಯಾಂಕಿಗೆ ಚೆಕ್ಕಿನ ಮೇಲೆ ನಮೂದಿತವಾದ ದಿನಾಂಕದಿಂದ ಮೂರು ತಿಂಗಳ ಕಾಲಾವಧಿಯೊಳಗಾಗಿ ಅಥವಾ ಅದರ ಮಾನ್ಯತಾವಧಿಯೊಳಗಾಗಿ, ಯಾವುದು ಶೀಘ್ರವೋ ಅದನ್ನು ಹಾಜರುಪಡಿಸಿರಬೇಕು.**
>
> **2. ಸಂದರ್ಭಾನುಸಾರ ಚೆಕ್ಕಿನ ಫಲದಾತನು ಅಥವಾ ಅದರ ತತ್ಕಾಲ ಸ್ವಾಧೀನದಾರನು ಚೆಕ್ಕಿನ ಮೊತ್ತವನ್ನು ಪಾವತಿಸುವಂತೆ ತಗಾದೆ ಮಾಡಿ ಚೆಕ್ ಪಾವತಿಗೊಳ್ಳದೇ ಹಿಂದಿರುಗಿಸಿದ ಬಗ್ಗೆ ಬ್ಯಾಂಕಿನಿಂದ ಮಾಹಿತಿಯನ್ನು ಪಡೆದ 30 ದಿನಗಳ ಕಾಲಾವಧಿಯೊಳಗೆ ತಿಳುವಳಿಕೆ ಪತ್ರವನ್ನು ಜಾರಿಗೊಳಿಸಿರಬೇಕು ಮತ್ತು**
>
> **3. ಸದರಿ ತಿಳುವಳಿಕೆ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ 15 ದಿನಗಳ ಕಾಲಾವಧಿಯೊಳಗೆ ಚೆಕ್ಕನ್ನು ಬರೆದಾತನು ಸಂದರ್ಭಾನುಸಾರ ಅದರ ತತ್ಕಾಲದ ಸ್ವಾಧೀನದಾರರಿಗೆ ಸದರಿ ಮೊತ್ತವನ್ನು ಪಾವತಿಸಲು ವಿಫಲನಾಗಿರುತ್ತಾನೆ.**

16. ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ದೂರುದಾರರು ದೂರಿನಲ್ಲಿ ತಿಳಿಸಿರುವ ಅಂಶಗಳನ್ನು ರುಜುವಾತುಪಡಿಸಲು ತನ್ನನ್ನು ತಾನು ಪ್ರಾ.ಸಾ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ ಮತ್ತು 5 ದಾಖಲಾತಿಗಳನ್ನು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಸದರಿ ಪ್ರಕರಣದಲ್ಲಿ ಪ್ರಸ್ತುತ ಪ್ರಕರಣದ ನಿಪಿ.1 ಚೆಕ್ ಸಂಖ್ಯೆ 000001 ರ ರೂ.1,70,000/- ಮೌಲ್ಯದ ಚೆಕ್ಕು ಆಗಿರುತ್ತದೆ. ನಿಪಿ.1 ಚೆಕ್ಕನ್ನು ಪರಿಶೀಲಿಸಿ ನೋಡಲಾಗಿ, ನಿಪಿ.1 ರಲ್ಲಿ ಚೆಕ್ಕನ್ನು ದಿನಾಂಕ 30.09.2025 ರಂದು ರಚಿಸಲಾಗಿದೆ ಎಂದು ನಮೂದಿಸಲಾಗಿದೆ. ವರ್ಗಾವಣೀಯ ಲಿಖಿತಗಳ ಅಧಿನಿಯಮ 1881 ಕಲಂ 138 ರ ಪರಂತು (ಎ) ತಿಳಿಸಿರುವಂತೆ ಚೆಕ್ಕನ್ನು ರಚಿಸಿದ ಮೂರು ತಿಂಗಳ ಕಾಲಾವಧಿಯ ಒಳಗಾಗಿ ಅಥವಾ ಅದರ ಸಿಂಧುತ್ವದ ಅವಧಿಯ ಒಳಗಾಗಿ ಯಾವುದು ಶೀಘ್ರವೋ ಆ ಅವಧಿಯ ಒಳಗಾಗಿ ಹಾಜರುಪಡಿಸಬೇಕೆಂದು ಹೇಳಿರುತ್ತದೆ. ನಿಪಿ.1 ಚೆಕ್ಕನ್ನು ದಿನಾಂಕ 30.09.2025 ರಂದು ರಚಿಸಲಾಗಿದೆ ಎಂದು ನಮೂದಿಸಲಾಗಿದೆ. ಸದರಿ ಚೆಕ್ಕನ್ನು ಬ್ಯಾಂಕಿಗೆ ನಗದೀಕರಿಸುವ ಸಲುವಾಗಿ ಹಾಜರುಪಡಿಸಿರುತ್ತಾರೆಂದು ನಿಪಿ-2 ರ ದಾಖಲೆಯಿಂದ ಕಂಡುಬರುತ್ತದೆ. ಸದರಿ ಚೆಕ್ಕು ದಿನಾಂಕ 10.10.2025 ರಂದು ಅಮಾನ್ಯಗೊಂಡಿರುತ್ತದೆ. ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ಪರಂತು (ಎ) ಪ್ರಕಾರ ನಿಪಿ.1 ರ ಚೆಕ್ಕನ್ನು ಮೂರು ತಿಂಗಳ ಒಳಗಾಗಿ ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ. ಆದ್ದರಿಂದ, ಪಿರ್ಯಾದುದಾರರು ಲಿಖಿತ ವರ್ಗಾವಣೀಯ

ಕಾಯ್ದೆಯ ಕಲಂ 138 ಪರಂತು 1(ಎ)ರಲ್ಲಿ ತಿಳಿಸಿರುವಂತೆ ಪಾಲನೆ ಮಾಡಿರುತ್ತಾರೆಂದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

17. ಪಿರ್ಯಾದುದಾರರು ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಪರಂತು (ಬಿ) ರಲ್ಲಿ ಹೇಳಿರುವ ಘಟಕಾಂಶಗಳನ್ನು ರುಜುವಾತುಪಡಿಸುವ ಸಲುವಾಗಿ ದೂರಿನಲ್ಲಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನಿಪಿ.1ರ ಚೆಕ್ಕನ್ನು ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಬ್ಯಾಂಕಿನವರು **'ಸಹಿಯಲ್ಲಿ ವ್ಯತ್ಯಾಸ ಇದೆ'** ಎಂದು ಅಮಾನ್ಯಗೊಂಡು ಅನಾಧಾರಿತವಾಗಿವೆ ಎಂದು ದಿನಾಂಕ 10.10.2025 ರಂದು ಹಿಂಬರಹ ನೀಡಿರುತ್ತಾರೆ. ಕಾಯ್ದೆ ಪ್ರಕಾರ ದಿನಾಂಕ 10.10.2025 ರಿಂದ 30 ದಿವಸಗಳ ಒಳಗಾಗಿ ಚೆಕ್ಕು ಅಮಾನ್ಯಗೊಂಡಿರುವ ಬಗ್ಗೆ ಚೆಕ್ಕಿನ ರಚಕನಿಗೆ ಲಿಖಿತ ರೂಪದಲ್ಲಿ ಒಂದು ತಿಳುವಳಿಕೆ ಪತ್ರ ನೀಡಬೇಕಾಗುತ್ತದೆ. ಪಿರ್ಯಾದುದಾರರು ದಿನಾಂಕ 18.10.2025 ರಂದು ವಕೀಲರ ಮೂಲಕ ತಿಳುವಳಿಕೆ ಪತ್ರ ನೀಡಿರುತ್ತಾರೆ ಎಂದು ಹೇಳಿರುತ್ತಾರೆ. ಫ್ರಾಸಾ-1 ರವರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ಆರೋಪಿಗೆ ನೀಡಿರುವ ತಿಳುವಳಿಕೆ ಪತ್ರದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಯನ್ನು ನಿಪಿ.3 ಎಂದು ಗುರುತಿಸಲಾಗಿದೆ. ನಿಪಿ.3 ರ ದಾಖಲೆಯನ್ನು ಪರಿಶೀಲಿಸಿ ನೋಡಲಾಗಿ ಪಿರ್ಯಾದುದಾರರು ನಿಪಿ.1 ರ ಚೆಕ್ಕು ಅಮಾನ್ಯಗೊಂಡಿದ್ದು, ಅಮಾನ್ಯಗೊಂಡ ಬಗ್ಗೆ ಹಾಗೂ ಚೆಕ್ಕಿನಲ್ಲಿ ನಮೂದು ಮಾಡಿರುವ ಮೊತ್ತವನ್ನು ತಿಳುವಳಿಕೆ ಪತ್ರ ತಲುಪಿದ 15 ದಿವಸಗಳ ಒಳಗಾಗಿ ಮರುಪಾವತಿ ಮಾಡುವಂತೆ ಕೋರಿರುತ್ತಾರೆ.

ಆದುದರಿಂದ, ಪಿರ್ಯಾದುದಾರರು ನಿಪಿ.1ರ ಚೆಕ್ಕು ಅಮಾನ್ಯಗೊಂಡು 30 ದಿವಸಗಳ ಒಳಗಾಗಿ ಚೆಕ್ಕು ಅಮಾನ್ಯಗೊಂಡ ಬಗ್ಗೆ ಚೆಕ್ಕು ರಚಕನಿಗೆ ಲಿಖಿತ ರೂಪದಲ್ಲಿ ತಿಳುವಳಿಕೆ ಪತ್ರ ನೀಡಿರುತ್ತಾರೆ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ. ಪಿರ್ಯಾದುದಾರರು ಕಳುಹಿಸಿರುವ ನಿಶಾನೆ ಪಿ-3 ತಿಳುವಳಿಕೆ ಪತ್ರ ಜಾರಿಯಾಗದೆ ದಿನಾಂಕ 30.10.2025 ರಂದು ವಾಪಸ್ಸು ಬಂದಿರುತ್ತದೆ. ಕಲಂ.138 (ಸಿ) ಪ್ರಕಾರ ಜಾರಿಯಾದ 15 ದಿನದ ಒಳಗಾಗಿ ಹಣ ಪಾವತಿ ಮಾಡದ ಕಾರಣ ಪಿರ್ಯಾದುದಾರರಿಗೆ ಪ್ರಸ್ತುತ ದೂರನ್ನು ಸಲ್ಲಿಸಲು ವ್ಯಾಜ್ಯ ಕಾರಣ ಉದ್ಭವವಾಗುತ್ತದೆ. ತದನಂತರ, ಆರೋಪಿ ಚೆಕ್ಕಿನಲ್ಲಿರುವ ಮೊತ್ತವನ್ನು ಪಾವತಿ ಮಾಡದೇ ಇರುವ ಕಾರಣ, ಪ್ರಸ್ತುತ ದೂರನ್ನು ನಿಗಧಿತ ಅವಧಿಯಲ್ಲಿ ಸಲ್ಲಿಸಿರುತ್ತಾರೆ.

18. ಪ್ರಾ.ಸಾ-1 ರವರು ತನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ದೂರಿನಲ್ಲಿ ತಿಳಿಸಿರುವ ಆಪಾಧನೆಗಳನ್ನು ಪುನರುಚ್ಚರಿಸಿರುತ್ತಾರೆ. ಪಿರ್ಯಾದುದಾರರು ತನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಆರೋಪಿಯು ಪರಿಚಯಸ್ಥರಾಗಿದ್ದು, ದಿನಾಂಕ 30.08.2025 ರಂದು ತನ್ನನ್ನು ಭೇಟಿಯಾಗಿ ಆರೋಪಿಯ ತನ್ನ ಕಾನೂನುಬದ್ಧ ಅವಶ್ಯಕತೆಗಳಿಗಾಗಿ ರೂ.1,70,000/- ಹಣವನ್ನು ಸಾಲವಾಗಿ ಪಡೆದುಕೊಂಡು, ಸದರಿ ಸಾಲದ ಮರುಪಾವತಿಗಾಗಿ ದಿನಾಂಕಃ 30.09.2025 ರಂದು ನಿಶಾನೆ ಪಿ-1 ರಂತೆ ಚೆಕ್ಕು ನೀಡಿದ್ದು, ಆರೋಪಿಯ ಸೂಚನೆಯಂತೆ ಸದರಿ ಚೆಕ್ಕನ್ನು ನಗದೀಕರಿಸಿಕೊಳ್ಳಲು ಬ್ಯಾಂಕಿಗೆ ಹಾಜರುಪಡಿಸಿದಾಗ, ಸದರಿ ಚೆಕ್ಕು ''**ಸಹಿಯಲ್ಲಿ ವ್ಯತ್ಯಾಸ**

ಇದೆ" ಎಂದು ಹೇಳಿ ನಿಶಾನೆ ಪಿ–2 ರಂತೆ ಹಿಂಬರಹ ನೀಡಿದ್ದು, ತದನಂತರ ನಿಶಾನೆ ಪಿ–3 ರಂತೆ ವಕೀಲರ ಮೂಲಕ ತಿಳುವಳಿಕೆ ಪತ್ರವನ್ನು ನೀಡಿ, ಪತ್ರವನ್ನು ಸ್ವೀಕರಿಸಿದ 15 ದಿನಗಳ ಅವಧಿಯ ಒಳಗಾಗಿ ಮರುಪಾವತಿ ಮಾಡುವಂತೆ ಕೋರಿದ್ದು, ಸದರಿ ತಿಳುವಳಿಕೆ ಪತ್ರದ ಬಗ್ಗೆ ಆರೋಪಿಗೆ ಮಾಹಿತಿ ಇದ್ದರೂ ಸಹ ನಿಶಾನೆ ಪಿ–3 ರಲ್ಲಿ ನಿಗಧಿಪಡಿಸಿದ ಅವಧಿಯಲ್ಲಿ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ಹೇಳಿರುತ್ತಾರೆ.

19. ಮತ್ತೊಂದು ಕಡೆ ಆರೋಪಿಯು ತನ್ನ ಪ್ರತಿರಕ್ಷಣೆಯಲ್ಲಿ ಪಿರ್ಯಾದುದಾರರಿಂದ ತಾನು ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ ಹಾಗೂ ತಾವು ಪಿರ್ಯಾದುದಾರರಿಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ ಎಂದು ಮತ್ತು ಸುಮಿತ್ರ ಎಂಬುವವರು ಮಹಿಳಾ ಸಂಘವನ್ನು ನಡೆಸುತ್ತಿದ್ದು, ಆರೋಪಿಯನ್ನು ಸದರಿ ಸಂಘದ ಸದಸ್ಯನಾಗಿ ಮಾಡುತ್ತೇನೆ ಎಂದು ಹೇಳಿ ಸುಮಿತ್ರ ರವರು ತನ್ನಿಂದ ಒಂದು ಚೆಕ್ಕನ್ನು ಪಡೆದುಕೊಂಡಿದ್ದು, ದೂರುದಾರರು ಸದರಿ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಹಾಗೂ ದೂರುದಾರರಿಗೆ ರೂ.1,70,000/– ಹಣವನ್ನು ಸಾಲವಾಗಿ ನೀಡುವ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದು ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ.

20. ಕಾನೂನಿನ ತತ್ವಗಳ ಪ್ರಕಾರ ಪ್ರತಿಯೊಂದು ವರ್ಗಾವಣೀಯ ಲಿಖಿತವನ್ನು ಆರೋಪಿಯದ್ದೇ ಎಂದು ದೂರುದಾರರು ರುಜುವಾತುಪಡಿಸಿದಾಗ, ಪ್ರತಿಕೂಲ

ಸಂಗತಿಗಳು ಸಾಬೀತು ಆಗುವವರೆಗೂ ಚೆಕ್ಕಿನ ಸ್ವಾಧೀನದಾರನು ಸದರಿ ಚೆಕ್ಕನ್ನು ಯಾವುದೇ ಸಾಲದ ಅಥವಾ ಇತರೆ ಹೊಣೆಗಾರಿಕೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಮರುಪಾವತಿ ಮಾಡುವ ಉದ್ದೇಶದಿಂದ ಊಹೆ ಮಾಡಬಹುದು. ಕಲಂ 139 ರ ಮೇರೆಗೆ ಮೇಲ್ಕಂಡಂತೆ ಊಹೆಯನ್ನು ಚೆಕ್ಕಿನ ಸ್ವಾಧೀನದಾರನ ಪರವಾಗಿ ಊಹೆ ಮಾಡಲಾಗುವುದು. ಕಲಂ 139 ರ ಮೇರೆಗೆ ಮಾಡಿದಂತಹ ವಿವರಣೆಯು ಈ ಕಲಂ ಉದ್ದೇಶಗಳಿಗಾಗಿ ಸಾಲ ಅಥವಾ ಇತರ ಹೊಣೆಗಾರಿಕೆ ಎಂದರೆ ಕಾನೂನು ರೀತ್ಯಾ ಜಾರಿಗೊಳಿಸಬಹುದಾದ ಹೊಣೆಗಾರಿಕೆ ಎಂಬುದಾಗಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು **ಶ್ರೀ ರಂಗಪ್ಪ ವಿರುದ್ಧ ಮೋಹನ್** ಉಲ್ಲೇಖಿತ ತೀರ್ಪಿನಲ್ಲಿ ಚೆಕ್ಕನ್ನು ಮತ್ತು ಅದರಲ್ಲಿರುವ ಸಹಿಯನ್ನು ಒಪ್ಪಿಕೊಂಡರೆ ಅದನ್ನು ಕಾನೂನುಬದ್ಧವಾಗಿ ಪಾವತಿ ಮಾಡುವ ಹಣಕ್ಕಾಗಿ ನೀಡಲಾಗಿದೆ ಎಂಬ ಪೂರ್ವಭಾವನೆಗೆ ಬರತಕ್ಕದ್ದೆಂದು ತಿಳಿಸಿರುತ್ತದೆ. ಸದರಿ ಪೂರ್ವಭಾವನೆಯು ಖಂಡಿಸಬಹುದಾದಂತಹ ಪೂರ್ವಭಾವನೆ ಆಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಆರೋಪಿಯು ನಿಶಾನೆ ಪಿ-1 ಚೆಕ್ಕು '**ಸಹಿಯಲ್ಲಿ ವ್ಯತ್ಯಾಸ ಇದೆ**' ಎಂದು ಅಮಾನ್ಯಗೊಂಡಿರುತ್ತದೆ. ಆದರೆ, ಆರೋಪಿಯು ನಿಶಾನೆ ಪಿ-1 ಚೆಕ್ಕಿನಲ್ಲಿರುವ ಸಹಿ ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ.

21. ಆರೋಪಿಯು ಫ್ರಾ.ಸಾ-1 ರವರನ್ನು ಪಾಟೀ ಸವಾಲು ಮಾಡುವ ಮೂಲಕ ಪಿರ್ಯಾದುದಾರರ ಪರವಾಗಿ ಇರುವ ಪೂರ್ವಭಾವನೆಯನ್ನು ಖಂಡಿಸುವ

ಪ್ರಯತ್ನವನ್ನು ಮಾಡಿರುತ್ತಾರೆ. ಆರೋಪಿಯು ದೂರುದಾರರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಆರೋಪಿ ಮತ್ತು ಆರೋಪಿ ಗಂಡ ತಮ್ಮ ಜೀವನಕ್ಕಾಗಿ ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿರುವುದಿಲ್ಲ ಮತ್ತು ಆರೋಪಿಗೆ ಹಣ ನೀಡಿದ ದಿನಾಂಕವು ಸಹ ಗೊತ್ತಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷ್ಯವನ್ನು ಪರಿಗಣಿಸಿದಾಗ, ದೂರುದಾರರು ಆರೋಪಿಗೆ ಸಾಲ ನೀಡಿರುವ ಬಗ್ಗೆ ಸಂಶಯ ಉದ್ಭವವಾಗುತ್ತದೆ. ಮತ್ತೊಂದು ಕಡೆ ಆರೋಪಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ ಸುಮಿತ್ರ ಎಂಬುವವರು ಮಹಿಳಾ ಸಂಘವನ್ನು ನಡೆಸುತ್ತಿದ್ದು, ಆರೋಪಿಯನ್ನು ಸದರಿ ಸಂಘದ ಸದಸ್ಯನಾಗಿ ಮಾಡುತ್ತೇನೆ ಎಂದು ಆರೋಪಿಯಿಂದ ಪ್ರಶ್ನಿತ ಚೆಕ್ಕನ್ನು ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ದೂರುದಾರರು ಆರೋಪಿಯನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಆರೋಪಿಯು ಮುಖ್ಯ ವಿಚಾರಣೆಯಲ್ಲಿ ನುಡಿದಿರುವ ಸಾಕ್ಷ್ಯವನ್ನು ನಿರಾಕರಿಸಿರುವುದಿಲ್ಲ.

22. ಮತ್ತೊಂದು ಮುಖ್ಯವಾದ ಅಂಶವೇನೆಂದರೆ, ದೂರುದಾರರು ಆರೋಪಿಯನ್ನು ಪಾಟೀ ಸವಾಲು ವಿಚಾರಣೆಗೆ ಒಳಪಡಿಸಿದಾಗ, ಆರೋಪಿಯು ಪಾಟೀ ಸವಾಲು ವಿಚಾರಣೆಯಲ್ಲಿ ನಿಶಾನೆ ಪಿ-1 ಚೆಕ್ಕಿನಲ್ಲಿರುವ ಸಹಿ ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ದೂರುದಾರರು ತಿಳುವಳಿಕೆ ಪತ್ರ ಕಳುಹಿಸಿದಾಗ ತಾನು ಕೆ.ಆರ್.ನಗರದಲ್ಲಿ ವಾಸವಾಗಿರುವುದಿಲ್ಲ. ಆ ಸಮಯದಲ್ಲಿ ಆರೋಪಿಯು ತಮಿಳುನಾಡಿನಲ್ಲಿ ವಾಸವಾಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ನಿಶಾನೆ ಪಿ–3 ತಿಳುವಳಿಕೆ ಪತ್ರವನ್ನು ದೂರುದಾರರು ಕೆ.ಆರ್.ನಗರ ವಿಳಾಸಕ್ಕೆ ಕಳುಹಿಸಿದ್ದು, ಸದರಿ ತಿಳುವಳಿಕೆ ಪತ್ರ ಆರೋಪಿಗೆ ಜಾರಿಯಾಗದೇ ವಾಪಸ್ಸು ಬಂದಿರುತ್ತದೆ. ಆರೋಪಿಯ ಪಾಟೀ ಸವಾಲು ವಿಚಾರಣೆಯನ್ನು ಪರಿಗಣಿಸಲಾಗಿ, ತಿಳುವಳಿಕೆ ಪತ್ರವನ್ನು ಕಳುಹಿಸುವ ಕಾಲಕ್ಕೆ ಆರೋಪಿಯು ತಾನು ತಮಿಳುನಾಡಿನಲ್ಲಿ ವಾಸವಾಗಿರುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ, ದೂರುದಾರರು ತಮಿಳುನಾಡಿನ ಆರೋಪಿಯ ವಿಳಾಸಕ್ಕೆ ಯಾವುದೇ ತಿಳುವಳಿಕೆ ಪತ್ರವನ್ನು ಕಳುಹಿಸಿರುವುದಿಲ್ಲ. ಬಹುಮುಖ್ಯವಾಗಿ ಆರೋಪಿಯು ತನ್ನ ಮುಖ್ಯ ವಿಚಾರಣೆಯಲ್ಲಿ ನಿಶಾನೆ ಪಿ–1 ಚೆಕ್ಕನ್ನು ಸುಮಿತ್ರ ರವರಿಗೆ ಮಹಿಳಾ ಸಂಘದ ಸದಸ್ಯನಾಗಿ ಮಾಡುವ ಸಮಯದಲ್ಲಿ ನೀಡಿರುತ್ತೇನೆ. ಆದರೆ, ಸದರಿ ಚೆಕ್ಕನ್ನು ಆರೋಪಿಗೆ ನೀಡಿರುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಸದರಿ ಸಾಕ್ಷಿ ವಿಚಾರಣೆಯನ್ನು ದೂರುದಾರರು ಪ್ರಶ್ನಿಸಿರುವುದಿಲ್ಲವಾದ ಕಾರಣ, ಆರೋಪಿಯು ನಿಶಾನೆ ಪಿ–1 ಚೆಕ್ಕನ್ನು ಸುಮಿತ್ರ ರವರಿಗೆ ನೀಡಲಾಗಿರುತ್ತದೆ ಎಂಬುವುದನ್ನು ಮೇಲ್ನೋಟಕ್ಕೆ ಸಾಬೀತುಪಡಿಸಿರುತ್ತಾರೆ. ಆದರೆ, ದೂರುದಾರರು ನಿಶಾನೆ ಪಿ–1 ಚೆಕ್ಕನ್ನು ರೂ.1,70,000/– ಹಣದ ಸಾಲದ ಮರುಪಾವತಿಗಾಗಿ ನೀಡಲಾಗಿದೆ ಎಂಬವುದನ್ನು ರುಜುವಾತುಪಡಿಸಲು ವಿಫಲರಾಗಿರುತ್ತಾರೆ.

23. ಈ ಮೇಲಿನ ಎಲ್ಲಾ ಕಾರಣಗಳಿಂದಾಗಿ ಪಿರ್ಯಾದುದಾರರು ಆರೋಪಿಯು ರೂ.1,70,000/– ಹಣವನ್ನು ಕಾನೂನಾತ್ಮಕವಾಗಿ ಪಾವತಿಸುವ ಭಾಧ್ಯತೆಯನ್ನು ಹೊಂದಿದ್ದಾನೆ ಎನ್ನುವ ಅಂಶವನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿರುವುದರಿಂದ

ಮತ್ತು ಆರೋಪಿಯು ವರ್ಗಾವಣೀಯ ಲಿಖಿತ ಕಾಯಿದೆ ಕಲಂ 118 ಮತ್ತು 139 ರ ಅಡಿಯಲ್ಲಿ ಇರುವ ಕಾನೂನಿನ ಪೂರ್ವಭಾವನೆಯನ್ನು ಖಂಡಿಸಿರುವುದರಿಂದ, ಆರೋಪಿಯು ನಿಶಾನೆ ಪಿ-1 ಚೆಕ್ಕಿನಲ್ಲಿ ಒಳಗೊಂಡಿರುವ ಹಣವನ್ನು ಪಾವತಿಸುವ ಭಾಧ್ಯತೆಯನ್ನು ಹೊಂದಿರುವುದಿಲ್ಲ ಎನ್ನುವ ಅಭಿಪ್ರಾಯಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ಆರೋಪಿಯು ನಿಪಿ-1 ಚೆಕ್ಕಿನಲ್ಲಿ ಒಳಗೊಂಡಿರುವ ಹಣವನ್ನು ಪಾವತಿಸುವ ಕಾನೂನಾತ್ಮಕ ಭಾಧ್ಯತೆಯನ್ನು ಹೊಂದಿರದ ಕಾರಣ ಆರೋಪಿಯು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಎಂದು ಈ ನ್ಯಾಯಾಲಯವು ನಿರ್ಣಯಿಸಿ ಆರೋಪಿಯು ದೋಷಮುಕ್ತ ಎಂಬ ಅಭಿಪ್ರಾಯಕ್ಕೆ ಬಂದಿರುತ್ತದೆ. **ಈ ಮೇಲಿನ ಎಲ್ಲಾ ಕಾರಣಗಳಿಂದಾಗಿ ಈ ನ್ಯಾಯಾಲಯವು 1 ನೇ ಅಂಶವನ್ನು ನಕಾರಾತ್ಮಕವಾಗಿ ಉತ್ತರಿಸುತ್ತದೆ.**

24. **ಅಂಶ.2:-** ಅಂಶ-1 ರ ಮೇಲಿನ ನಿರ್ಣಯದಿಂದ ಈ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

ಆ ದೇ ಶ

ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಕಲಂ 278(1) ರ ಅಡಿಯಲ್ಲಿ ನೀಡಿರುವ ಅಧಿಕಾರವನ್ನು ಚಲಾಯಿಸಿ ಆರೋಪಿಯು ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರಡಿಯಲ್ಲಿ ಯಾವುದೇ ಅಪರಾಧವನ್ನು ಮಾಡಿಲ್ಲ ಎಂದು ನಿರ್ಣಯಿಸಿ ಆರೋಪಿಯನ್ನು ಖುಲಾಸೆ ಮಾಡಲಾಗಿದೆ.

ಆರೋಪಿಯ ಮುಚ್ಚಳಿಕೆಯು 6 ತಿಂಗಳ ಕಾಲ ಚಾಲ್ತಿಯಲ್ಲಿರುತ್ತದೆ. ನಂತರ ಸದರಿ ಜಾಮೀನು ಮುಚ್ಚಳಿಕೆ ರದ್ದಾಗುತ್ತದೆ.

*(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು, ಬೆರಳಚ್ಚು ಮಾಡಿದ ನಂತರ ನಾನು ಅದನ್ನು ಓದಿ ತಪ್ಪುಗಳನ್ನು ತಿದ್ದಿದ ನಂತರ ಈ ದಿನ ಅಂದರೆ ದಿನಾಂಕಃ **09.06.2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.)*

(ಅರವಿಂದ್ರ ಬಿ.ಸಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೆ.ಆರ್.ನಗರ.

ಅನುಬಂಧಗಳ ಪಟ್ಟಿ

ಪಿರ್ಯಾದುದಾರರ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ-

ಪಿ.ಡಬ್ಲ್ಯೂ.1 ಶ್ರೀಮತಿ ಸುಶೀಲ

ಪಿರ್ಯಾದುದಾರರ ಪರ ನಿಶಾನೆಯಾದ ದಾಖಲೆಗಳ ಪಟ್ಟಿಃ-

ನಿಪಿ-1	ದಿನಾಂಕ 30.09.2025 ರ ಚೆಕ್ಕು ಸಂಖ್ಯೆ 000001
ನಿಪಿ-2	ದಿನಾಂಕ 10.10.2025 ರ ಹಿಂಬರಹ
ನಿಪಿ-3	ದಿನಾಂಕ 18.10.2025 ರಂದು ಪಿರ್ಯಾದುದಾರರು ತನ್ನ ವಕೀಲರ ಮುಖಾಂತರ ಆರೋಪಿಗೆ ನೀಡಿದ ತಿಳುವಳಿಕೆ ಪತ್ರ
ನಿಪಿ-4	ಅಂಚೆ ರಶೀದಿ
ನಿಪಿ-5	ಜಾರಿಯಾಗದೇ ವಾಪಸ್ಸು ಬಂದಿರುವ ಅಂಚೆ ಲಕೋಟೆ

ಆರೋಪಿಯ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ

ಡಿ.ಡಬ್ಲ್ಯೂ.1 ಶ್ರೀಮತಿ ಸುಶೀಲಮ್ಮ

ಆರೋಪಿತರ ಪರ ನಿಶಾನೆಯಾದ ದಾಖಲೆಗಳ ಪಟ್ಟಿ:

–ಇಲ್ಲಾ–

Digitally signed by ARAVINDRA B C
Location: Senior Civil Judge and JMFC, K.R.Nagar

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೆ.ಆರ್.ನಗರ.